(ಇಂದು ದಿನಾಂಕಃ **28-05-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಸಲ್ಲಿಸಿದ ದೂರಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಬಲ್ಲರವಾಡ ಗ್ರಾಮದ ಖಾಯಂ ನಿವಾಸಿ. ನನ್ನ ಹೆಸರಿನಲ್ಲಿ 24 ಎಕರೆ ಜಮೀನು ಇರುತ್ತದೆ. ನನಗೆ ಆರೋಪಿ 2012 ರಿಂದ ಪರಿಚಯವಿರುತ್ತಾರೆ. ನಾನು ಆರೋಪಿಯನ್ನು 1 ತಿಂಗಳಿನ ಹಿಂದೆ ನವಲಗುಂದದಲ್ಲಿ ಕೊನೆಯ ಬಾರಿ ಭೇಟಿಯಾಗಿರುತ್ತೇನೆ. ನೋಟಿಸ ನೀಡುವುದಕ್ಕಿಂತ ಮುಂಚೆ ನಾನು ಆರೋಪಿಯನ್ನು ನವಲಗುಂದದ ನ್ಯಾಯಾಲಯದಲ್ಲಿ ಭೇಟಿಯಾಗಿರುತ್ತೇನೆ. ಆರೋಪಿತನ ಸಂಸ್ಥೆಯ ಹೆಸರು ನನಗೆ ನೆನಪಿಲ್ಲ. ಸದರಿ ಸಂಸ್ಥೆ ನೋಂದಣಿಯಾಗಿದೇ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿಯ ಸಂಸ್ಥೆಯ ಹೆಸರು ನನಗೆ ನೆನಪಿಲ್ಲ. ಸದರಿ ಸಂಸ್ಥೆ ಯಾವ ಊರಿನಲ್ಲಿದೆ ಎಂದು ನನಗೆ ನೆನಪಿಲ್ಲ. ನಾನು ಪ್ರಸ್ತು ದೂರನ್ನು ಆರೋಪಿಯ ಸಂಸ್ಥೆಯ ವಿರುದ್ಧ ಸಲ್ಲಿಸಿರುತ್ತೇನೆ. ಸದರಿಯವನ ಸಂಸ್ಥೆಯ ಹೆಸರನ್ನು ನಾನು ನನ್ನ ದೂರಿನಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ.

2. ನಾನು ಆರೋಪಿಯ ಸಂಸ್ಥೆಗೆ ಮೊದಲನೇ ಬಾರಿ ಹತ್ತಿ ಬೆಳೆ ಮಾರಾಟ ಮಾಡಿರುತ್ತೇನೆ. ಸದರಿ ಹತ್ತಿ ಯನ್ನು 2012 ರಿಂದ ಆತನಿಗೆ ಮಾರಾಟ ಮಾಡುತ್ತೀರುತ್ತೇನೆ. ಸದರಿಯವನಿಗೆ ಮೊದಲನೇ ಬಾರಿಗೆ ನಾನು 100 ಕ್ವಿಂಟಾಲ್ ಹತ್ತಿ ಯನ್ನು ಮಾರಾಟ ಮಾಡಿರುತ್ತೇನೆ. ಸದರಿ ಹತ್ತಿಯನ್ನು ಪ್ರತಿ ಕ್ವಿಂಟಾಲ್ ಗೆ 5100/-, 5200/- ರೂಗಳಂತೆ ಮಾರಾಟ ಮಾಡಿರುತ್ತೇನೆ. ಸಾಮಾನ್ಯವಾಗಿ ಬೆಳೆ ಮಾರಾಟ ಮಾಡಬೇಕಾದರೆ ತೂಕ ಮಾಡಿಸಬೇಕಾಗುತ್ತದೆ ಎಂದರೆ ಸರಿ. ಸದರಿ ಒಟ್ಟು ಹತ್ತಿಯ ಮೌಲ್ಯ ರೂ. 7,21,272/- ಆಗಿತ್ತು. ಹತ್ತಿಯನ್ನು ಖರೀದಿಸಲು ಬೇರೆ ಬೇರೆ ಊರಿನಿಂದ ಖರೀದಿದಾರರು ಬರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹತ್ತಿ ಖರೀದಿ ಮಾಡಿದಾಗ ಖರೀದಿದಾರರು ಅದರ ತೂಕ ಹಾಗೂ ಮೌಲ್ಯವನ್ನು ನಮೂದಿಸಿ ಬಿಲ್ ನೀಡುತ್ತಾರೆ ಎಂದರೆ ಸರಿ. ಸದರಿ 100 ಕ್ವಿಂಟಾಲ್ ಹತ್ತಿಗೆ ಸಂಬಂಧಿಸಿ ನನಗೆ ಬಿಲ್ ಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿಯ ಸಂಸ್ಥೆಯ ಹೆಸರಿನಿಂದ ಬಿಲ್ ನೀಡಲಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಸದರಿ ಬಿಲ್ ನ್ನು ಹಾಜರು ಪಡಿಸಿದ ನಂತರ ಹಣ ಪಾವತಿ ಮಾಡಲಾಗುತ್ತದೆ ಎಂದರೆ ಸರಿ. ರೂ. 7,21,272/- ಗಳ ವ್ಯವಹಾರ ದಿನಾಂಕಃ 06-12-2018 ರಂದು ಆಗಿರುತ್ತದೆ.

3. ಆರೋಪಿ ಸಂಸ್ಥೆಯವರು ನೀಡಿದ ರಶೀದಿಯನ್ನು ನಾನು ಹಾಜರು ಪಡಿಸಿರುತ್ತೇನೆ. ದಿನಾಂಕಃ 06-12-2018 ರ ನಂತರ ನಾನು ಆರೋಪಿಯೊಂದಿಗೆ ಪುನಃ ವ್ಯವಹಾರ ಮಾಡಿರುವುದಿಲ್ಲ. ಕಲ್ಲಪ್ಪ ಬಸಪ್ಪ ಶಾನವಾಡ ನನ್ನ ಸಹೋದರ. ಬಸಪ್ಪ ದೇವಪ್ಪ ಶಾನವಾಡ ನನ್ನ ತಂದೆ. ನನ್ನ ತಂದೆ ಈಗ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ನಾವಿಬ್ಬರೂ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇರುತ್ತಾಳೆ.

4. ಒಪ್ಪಿಗೆ ಪತ್ರದಲ್ಲಿರುವ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಸಹೋದರನಿಗೆ ಗೊತ್ತು ಎಂದು ನುಡಿದಿರುತ್ತಾರೆ. ಸದರಿ ಒಪ್ಪಿಗೆ ಪತ್ರವನ್ನು ಆರೋಪಿ ನನ್ನ ಅಣ್ಣನ ಹೆಸರಿಗೆ ಬರೆದುಕೊಟ್ಟಿರುತ್ತಾನೆ. ಸದರಿ ಒಪ್ಪಿಗೆ ಪತ್ರವನ್ನು ಸದರಿ ಒಪ್ಪಿಗೆ ಪತ್ರವನ್ನು ತನ್ನ ವೈಯಕ್ತಿಕ ನಾತೆಯಿಂದ ಬರೆದುಕೊಟ್ಟಿರುತ್ತಾರೆ. ನಾನು ವ್ಯವಹಾರವನ್ನು ಸಂಸ್ಥೆಯೊಂದಿಗೆ ಮಾಡಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿ.

5. ಸಾಕ್ಷಿಗೆ ತಾವು ಹಾಜರು ಪಡಿಸಿರುವ ಒಪ್ಪಿಗೆ ಪತ್ರವನ್ನು ತೋರಿಸಿದ್ದು, ಅದನ್ನು ನೋಡಿ ಸಾಕ್ಷಿ ತನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಪ್ರಸ್ತುತ ಪ್ರಕರಣದ ಆರೋಪಿಯ ವಿರುದ್ಧ ಇನ್ನೊಂದು ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ನನ್ನ ತಂದೆ ಆರೋಪಿಗೆ ಎಷ್ಟು ಕ್ವಿಂಟಾಲ್ ಹತ್ತಿಯನ್ನು ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು, ನನ್ನ ಸಹೋದರ ಹಾಗೂ ನನ್ನ ತಂದೆ ಎಲ್ಲರೂ ಸೇರಿ ಒಟ್ಟಿಗೆ ಆರೋಪಿಯೊಂದಿಗೆ ವ್ಯವಹಾರ ಮಾಡಿರುತ್ತೇವೆ. ನಾನು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತುಂಬಿ ಚೆಕ್ ನ್ನು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ರಶೀದಿಯನ್ನು ಹಾಜರು ಪಡಿಸಿರುವುದಿಲ್ಲ. ಆರೋಪಿ ತನ್ನ ವೈಯಕ್ತಿಕವಾಗಿ ಚೆಕ್ ನ್ನು ನೀಡಿರುತ್ತಾನೆ. ಆದರೆ ಸಂಸ್ಥೆಯ ಪರವಾಗಿ ನೀಡಿರುವುದಿಲ್ಲ. ಚೆಕ್ ಬ್ಯಾಂಕ್ ನಿಂದ ಮರಳಿ ಬಂದ ನಂತರ ಸದರಿ ಚೆಕ್ ಕುರಿತು ನನ್ನ ಅಣ್ಣ ಆರೋಪಿಗೆ ಕೇಳಿದ್ದು, ಆದರೆ ನಾನು ಕೇಳಿರುವುದಿಲ್ಲ. ನನ್ನ ಅಣ್ಣನ ಮಾತು ಕೇಳಿ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ಎಲ್ಲರೂ ಸೇರಿ ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಹತ್ತಿ ಮಾರಾಟ ಮಾಡಿದ ರಶೀದಿಯನ್ನು ನಮ್ಮ ಮೂರೂ ಜನರ ಹೆಸರಿನಲ್ಲಿ ಸಾಮೂಹಿಕವಾಗಿ ನೀಡಲಾಗಿದೆ. ಸದರಿ ರಶೀದಿಯನ್ನು 2018 ರಲ್ಲಿ ನೀಡಲಾಗಿದ್ದು, ಆದರೆ ನಿಖರವಾದ ದಿನಾಂಕ ಹಾಗೂ ತಿಂಗಳು ನನಗೆ ನೆನಪಿಲ್ಲ. ಸದರಿ ರಶೀದಿಯನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ನಾನು ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಯಾವುದೇ ರಶೀದಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

6. ಆರೋಪಿ ನಿಪಿ-1 ನ್ನು ನವಲಗುಂದದ ಸಿದ್ದೇಶ್ವರ ಜೀನ್ ನಲ್ಲಿ ನೀಡಿರುತ್ತಾನೆ. ಸದರಿ

ಚೆಕ್ ನೀಡುವ ವೇಳೆ ಯಾರು ಹಾಜರಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಿನ ಆರೋಪಿ ಒಟ್ಟು 3 ಚೆಕ್ ಗಳನ್ನು ನೀಡಿರುತ್ತಾನೆ. ನಿಪಿ-1 ರಲ್ಲಿರುವ ಹಸ್ತಾಕ್ಷರಗಳು ಆರೋಪಿಗೆ ಸಂಬಂಧಿಸಿದ್ದವು. ನಿಪಿ-1 ನ್ನು ಕೊಡುವುದಕ್ಕಿಂತ ಮುಂಚೆ ನನ್ನ ಹಾಗೂ ಆರೋಪಿಯ ನಡುವೆ 2012 ರಿಂದ ವ್ಯವಹಾರಗಳು ಇರುತ್ತವೆ. ಚೆಕ್ ನೀಡುವುದಕ್ಕಿಂತ ಮುಂಚೆ ಆದ ವ್ಯವಹಾರಗಳ ಬಗ್ಗೆ ಒಪ್ಪಿಗೆ ಪತ್ರ ಇದ್ದು, ಬೇರೆ ದಾಖಲೆಗಳು ಇರುವುದಿಲ್ಲ. ನಾನು 2018 ರಲ್ಲಿ ಆರೋಪಿಯೊಂದಿಗೆ ಯಾವುದೇ ರೀತಿಯ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

7. ಆರೋಪಿಯ ಸಂಸ್ಥೆಯ ಮೇಲಿ ಕ್ರಮ ಕೈಗೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಾಗುವುದಕ್ಕಿಂತ ಮುಂಚೆ ಆರೋಪಿಯ ಸಂಸ್ಥೆಗೆ ನೋಟೀಸ್ ನೀಡಿದ್ದೀರಾ ಎಂದರೆ ನನ್ನ ಸಹೋದರನಿಗೆ ಗೊತ್ತು ಎಂದು ನುಡಿದಿರುತ್ತಾರೆ. ಆರೋಪಿಯ ಸಂಸ್ಥೆ ಇನ್ನೂ ಅಸ್ತಿತ್ವದಲ್ಲಿದೆ ಎಂದರೆ ಸರಿಯಲ್ಲ. ಸದರಿ ಸಂಸ್ಥೆ ಯಾವಾಗ ಮುಚ್ಚಿರುತ್ತದೆ ನನಗೆ ಗೊತ್ತಿಲ್ಲ. ಸದರಿ ಸಂಸ್ಥೆ ನವಲಗುಂದದಲ್ಲಿರುತ್ತದೆ. ಸದರಿ ಸಂಸ್ಥೆ ಸಿದ್ದೇಶ್ವರ ಜೀನಿಂಗ್ ಮಿಲ್ ಎಂದು ಇರುತ್ತದೆ.

8. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ರೀತಿ ವೈಯಕ್ತಿಕ ವ್ಯವಹಾರಗಳು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರೀತಿಯ ಒಪ್ಪಿಗೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**